ದಿನಾಂಕಃ 17.07.2025

ಅಸಲುದಾವಃ 219/2022

ಡಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ಎಸ್.ಎಸ್.ಎಲ್.ಸಿವರೆಗೆ ಓದಿರುತ್ತೇನೆ. ಮರಿಲಿಂಗಮ್ಮನವರು ಬದುಕಿದ್ದಾರೆ ಅವರು ನಮ್ಮ ಜೊತೆಯಲ್ಲಿಯೇ ಇದ್ದಾರೆ. ಮರಿಲಿಂಗಮ್ಮನವರ ಗಂಡನ ಹೆಸರು ಮಂಚಯ್ಯ. ಮಂಚಯ್ಯನ ತಂದೆಯ ಹೆಸರು ಕರಿಯಯ್ಯ. ಮಂಚಯ್ಯನ ಜೊತೆ ಹುಟ್ಟಿದವರು ರಾಜಣ್ಣ ಮತ್ತು ಇನ್ನೊಬ್ಬರು ಲೇಟ್ ಪುಟ್ಟಸ್ವಾಮಿ. ಮಂಚಯ್ಯನವರಿಗೆ ಏನೇನು ಆಸ್ತಿಗಳು ಇದ್ದವು ಗೊತ್ತಾ ಎಂದರೆ ಸಾಕ್ಷಿ ಗೊತ್ತು, 98/3 ಮತ್ತು 98/4, 4 ಎಕರೆ ಜಮೀನು ಇತ್ತು, ಅದರ ಸರ್ವೆ ನಂಬರ್ ನಾನು ಸರಿಯಾಗಿ ನೋಡಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ-1 ಮತ್ತು 2 ಅನ್ನು ತೋರಿಸಿ, ನೀವು ಹೇಳಿದ ಸರ್ವೆ ನಂ.98/3 ಮತ್ತು 98/4 ಸ್ವತ್ತುಗಳಾ ಎಂದರೆ ಸಾಕ್ಷಿ ಸದರಿ ದಾಖಲಾತಿಗಳನ್ನು ನೋಡಿ ಹೌದು ಎಂದು ಉತ್ತರಿಸುತ್ತಾರೆ. ನನ್ನ ಮದುವೆ 1997 ರಲ್ಲಿ ಆಗಿರುತ್ತದೆ. ಈ ಆಸ್ತಿ ವಿಚಾರವಾಗಿ ನನಗಿಂತ ನನ್ನ ಅತ್ತೆಗೆ ಚೇನ್ನಾಗಿ ಗೊತ್ತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ಜಮೀನುಗಳಲ್ಲಿ ಎಷ್ಟು ವಿಸ್ತೀರ್ಣ ಭೂ ಸ್ವಾಧೀನವಾಯಿತು ಎಂದು ನಿಮ್ಮ ಅತ್ತೆ ತಿಳಿದುಕೊಂಡಿದ್ದಾರ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಭೂ ಸ್ವಾಧೀನವಾದ ಕೇಸನ್ನು ನನ್ನ ಅತ್ತೆಯವರೇ ನಡೆಸಿದ್ದು ಎಂದರೆ ಸರಿ. ಸದರಿ ಭೂ ಸ್ವಾಧೀನವಾದ ಕೇಸಿನಲ್ಲಿ ಒಟ್ಟು ಎಷ್ಟು ಹಣ ಬಂದಿದೆ ಎಂದು ಗೊತ್ತು ಎಂದರೆ ಸಾಕ್ಷಿ ಮೂರು ಸಾರಿ ಬಂದಿದೆ, ಒಂದು ಸಾರಿ 9 ಲಕ್ಷ, 2 ನೇ ಸಾರಿ 38 ಲಕ್ಷ ಬಂದಿದೆ, ಮೂರನೇ ಸಾರಿ ಹಣ ಬಂದಿದೆ ಎಂದು ಹೇಳಿ ನನ್ನ ಸಹಿಯನ್ನು ಪಡೆದುಕೊಂಡು ಹೋದರು ಆದರೆ ಎಷ್ಟು ಹಣ ಬಂದಿದೆ ಎಂದು ಬಂದಿದೆಯೋ ಇಲ್ಲವೂ ಎಂದು ನಮಗೇನು ಹೇಳಿಲ್ಲ ಎಂದು ಉತ್ತರಿಸುತ್ತಾರೆ. ಪರಿಹಾರದ ಹಣ ನಿಮ್ಮ ಅತ್ತೆಯ ಬ್ಯಾಂಕ್ ಖಾತೆಗೆ ಬರುತ್ತಿತ್ತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ಅತ್ತೆ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯಾ ನುಡಿದರೆ ಸತ್ಯ ಹೊರಬರುತ್ತದೆ ಎಂದು ನೀವು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಹೌದು, ಅವರಿಗೆ ವಯಸ್ಸಾಗಿದೆ ಎಂದು ಉತ್ತರಿಸುತ್ತಾರೆ. ವಾದಿ ಮಧುಸೂದನ್ ಯಾರೆಂದು

ಗೊತ್ತಾ ಎಂದರೆ ಸಾಕ್ಷಿ ಅವರು ಯಾರೆಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕೇಸು ಹಾಕಿದ ನಂತರವಾದರು ಅವರು ಯಾರು, ಯಾಕೆ ಕೇಸು ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಹೌದು, ತಿಳಿದುಕೊಂಡಿದ್ದೇನೆ, ನಾನು ಹಣವನ್ನು ಪಡೆದುಕೊಂಡಿದ್ದೆನೆ ಎಂದು ಕೇಸು ಹಾಕಿದ್ದಾರೆ ಎಂದು ಉತ್ತರಿಸುತ್ತಾರೆ. ಭೂ ಸ್ವಾಧೀನದ ಪರಿಹಾರದ ಹಣಕ್ಕೆ ಮಂಚಯ್ಯ, ಹೊಂಬಾಳೆ, ದಡಿಯ ಮೂರು ಜನ ಸೇರಿ ಎಲ್.ಎ.ಸಿ 9/2007 ಕೇಸನ್ನು ಹಾಕಿದ್ದರು ಎಂದರೆ ಸಾಕ್ಷಿ ಆ ಮೂರು ಜನರು ಕೇಸು ಹಾಕಲಿಲ್ಲ ಎಂದು ಉತ್ತರಿಸುತ್ತಾರೆ. ಆ ಕೇಸು ನಡೆಯುತ್ತಿರುವಾಗ ನಿಮ್ಮ ಮಾವ ಮಂಚಯ್ಯ ತೀರಿಕೊಂಡರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ಮಾವ ತೀರಿಕೊಂಡ ನಂತರ ನಿಮ್ಮ ಅತ್ತೆ, ನಿಮ್ಮ ನಾದಿನಿ ಮತ್ತು ನಿಮ್ಮನ್ನು ಪಕ್ಷಕಾರರಾಗಿ ಸೇರಿಸಲಾಯಿತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮನ್ನು ಆ ಕೇಸಿನಲ್ಲಿ ಪಾರ್ಟಿ ಮಾಡಿದ ಕಾರಣ ಆ ಕೇಸಿನ ವಿಚಾರವೆಲ್ಲಾ ನಿಮಗೆ ಗೊತ್ತು ಎಂದರೆ ಸಾಕ್ಷಿ ಗೊತ್ತು ಎಂದು ಉತ್ತರಿಸುತ್ತಾರೆ. ಆ ಕೇಸಿನ 2 ನೇ ಕ್ಲೇಮುದಾರರಾದ ಹೊಂಬಾಳಯ್ಯ ತೀರಿಕೊಂಡ ನಂತರ ಅವರ ವಾರಸುದಾರರಾದ ಮಾಯಮ್ಮ, ಇಂದ್ರಮ್ಮ, ಮಧುಸೂದನ್ ರವರನ್ನು ಪಕ್ಷಕಾರರಾಗಿ ಸೇರಿಸಲಾಯಿತು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

**ವಿನಂತಿಯ ಮೇರೆಗೆ ಮುಂದುವರಿದ ಪಾಟೀ ಸವಾಲು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.